**ಮೇಷ್ಟ್ರು:** ನಿಮ್ಮ ಅಪ್ಪ ಸಾಹುಕಾರ. ನೀನ್ ನೋಡಿದ್ರೆ ಫೀಸ್ ಕಟ್ಟೋಕೆ ದುಡ್ಡಿಲ್ಲ ಅಂತಿಯಾ. ಹೇಗೋ ಇದು?
**ಗುಂಡ:** ಹೆಸರಲ್ಲಷ್ಟೇ ನಮ್ಮಪ್ಪ ಸಾಹುಕಾರ.

**ಪೊಲೀಸ್:** 'ನನ್ನ ಬಂಧಿಸಿ, ನಿಮ್ಮ ಜೀವನವನ್ನು ನಿಮ್ಮ ಕೈಯಾರೆ ಹಾಳು ಮಾಡಿಕೊಳ್ಳಬೇಡಿ ಸರ್' ಅಂತಿದ್ದೀಯಲ್ಲ, ಅದರ ಅರ್ಥ ಏನು?
**ಕಳ್ಳ:** ಕಳ್ಳತನ ಮಾಡೋಕೆ ಸುಪಾರಿ ಕೊಟ್ಟಿದ್ದೇ ನಿಮ್ಮ ಹೆಂಡತಿ. ಅದ್ಕೆ ಸರ್!

**ಮಹಿಳೆ:** ' 1000 ಕೊಟ್ಟರೆ ನಿನಗೆ ಕಾಶಿ ವಿಶ್ವನಾಥನ ದರ್ಶನ ಆಗುತ್ತೆ, ಪುಣ್ಯ ಬರುತ್ತೆ' ಅಂತಿದ್ದೀಯಲ್ಲ ಅದು ಹೇಗೆ?
**ಸನ್ಯಾಸಿ:** ಕಾಶಿಗೆ ಹೋಗೋದಕ್ಕೆ ನನ್ನ ಹತ್ರ 1000 ಕಮ್ಮಿ ಇದೆ. ನೀವು ಆ ಹಣವನ್ನು ನನಗೆ ಕೊಟ್ಟರೆ ನಾನು ಕಾಶಿಗೆ ಹೋಗಿ ಬರ್ತೀನಿ. ನಾನು ದರ್ಶನ ಮಾಡಿದ್ರೆ ನೀವು ಮಾಡಿದಂತೆ, ನನಗೆ ಪುಣ್ಯ ಬಂದ್ರೆ ನಿಮಗೆ ಬಂದಂತೆ.

ದೇಶದಾದ್ಯಂತ 20 ನಕಲಿ ವಿಶ್ವವಿದ್ಯಾಲಯ



ನೀನು ಓದದೆ ಪದವಿ ಪಡಕೊಂಡಾಗಲೇ ಸಂಶಯ ಬಂತು!

**ಅಮ್ಮ:** ನಿನ್ನ ಹೆಂಡತಿ, ಯಾವಾಗಲೂ ಅಡುಗೆ ಮನೆಯ ಪಾತ್ರೆಗಳನ್ನು ಒದೆಯುತ್ತಿರುತ್ತಾಳೆ. ಯಾಕೆ?
**ಮಗ:** ಅಕ್ಕಿ ತುಂಬಿದ ಪಾವನ್ನು ಒದೆಸಿ ಮನೆಗೆ ಯಾವಾಗ ತುಂಬಿಸಿಕೊಂಡೆಯೋ... ಆವಾಗಿನಿಂದಲೂ ಅವಳು ಹೀಗೇನೆ...

**ರಂಗ:** ಪಕ್ಕದ ಮನೆ ಮುಂದೆ ಅಷ್ಟೊಂದು ಹುಡುಗರು ಯಾಕೆ ಸರದಿ ನಿಂತಿದ್ದಾರೆ?
**ಗುಂಡ:** 'ನಮ್ಮ ಹುಡುಗಿಯನ್ನು ಮದುವೆ ಮಾಡಿಕೊಂಡವರಿಗೆ ವರದಕ್ಷಿಣೆಯಾಗಿ ಟೊಮ್ಯಾಟೊ ಕೊಡ್ತೀವಿ' ಅಂತ ಬೋರ್ಡ್ ಹಾಕಿದ್ದಾರೆ ಅದ್ಕೆ.
**ರಂಗ:** ಪಾಪ ಆ ದಡ್ ನನ್ಮಕ್ಕಳಿಗೆ ಟೊಮ್ಯಾಟೊ ದರ ಕಡಿಮೆ ಆಗಿದೆ ಅನ್ನೋದೆ ಗೊತ್ತಿದ್ದಂತಿಲ್ಲ.
**ಗುಂಡ:** ಸರದಿಯಲ್ಲಿ ನಿಂತು ಹಳ್ಳಕ್ಕೆ ಬೀಳ್ತಿದ್ದಾರೆ. ನಮಗ್ಯಾಕೆ ಅವರ ಚಿಂತೆ ಬಿಡು.

**ಜಡ್ಜ್:** ಅದ್ಯಾವುದೋ ಧಾರಾವಾಹಿಯನ್ನು ಈ ಕೈದಿ ಕೊನೆತನಕ ನೋಡುವ ಕೊನೆಯ ಆಸೆಯನ್ನು ವ್ಯಕ್ತಪಡಿಸಿದ್ದಾನೆ. ಹೀಗಾಗಿ, ಆ ಧಾರಾವಾಹಿಯ ನಿರ್ಮಾಪಕನನ್ನು ಸಂಪರ್ಕಿಸಿ, ಅದು ಯಾವಾಗ ಮುಗಿಯುತ್ತೆ ಅನ್ನುವುದನ್ನು ಕೇಳಿ ಹೇಳಿ.
**ಲಾಯರ್:** ಮಹಾಸ್ವಾಮಿ ಆ ಧಾರಾವಾಹಿಯ ನಿರ್ಮಾಪಕನೇ ಈ ಕೈದಿ...

ಸಂಗ್ರಹ: ಬಿ.ಆರ್. ಉಷಾ, ಬೆಂಗಳೂರು

---

ನಂಜ ಕಂಠಪೂರ್ತಿ ಕುಡಿದು ಬಂದಿದ್ದ. ಗಂಟಲು ಕಿತ್ತುಬರುವವರೆಗೆ ಕಿರುಚಾಡಿ ಬಾಗಿಲು ತಟ್ಟಿದರೂ ಹೆಂಡತಿ ಮಾತ್ರ ಬಾಗಿಲನ್ನು ತೆರೆಯಲೇ ಇಲ್ಲ. ವಿಧಿಯಿಲ್ಲದೇ ಮಧ್ಯರಾತ್ರಿಯವರೆಗೆ ಅಲ್ಲೇ ಉಳಿದ. ನಡುರಾತ್ರಿಯಲ್ಲಿ ಕುಡಿತದ ಅಮಲು ಇಳಿಯಿತು. ಹೆಂಡತಿಯನ್ನು ಚೆನ್ನಾಗಿ ಹೊಡೆಯಬೇಕೆಂದು ಮನದಲ್ಲಿ ಕುದಿಯುತ್ತಿದ್ದ. ಸಾವರಿಸಿಕೊಂಡು ಬಾಗಿಲತ್ತ ಕಣ್ಣಾಯಿಸಿದ. ಅದು ತನ್ನ ಮನೆಯೂ ಅಲ್ಲ, ತನ್ನ ಮನೆಯಿರುವ ಬೀದಿಯೂ ಅಲ್ಲ. ಹಾಗಾಗಿ ತನ್ನ ಮನೆಯತ್ತ ಹೆಜ್ಜೆ ಹಾಕಿದ.

**ನಂಜ:** ಸೂರ್ಯೋದಯಕ್ಕೂ ಮುನ್ನ ಏಳುವುದು ಒಳ್ಳೆಯ ಅಭ್ಯಾಸ. ನೀನ್ಯಾಕೆ ಅದನ್ನು ರೂಢಿಸಿಕೊಳ್ಳಬಾರದು?
**ಮಂಜ:** ಹಾಗಂತ ಬೇಗ ಎದ್ದರೆ ಸೂರ್ಯನಿಗೆ ಅವಮಾನ ಮಾಡಿದಂತಾಗುತ್ತೆ. ಹೀಗಾಗಿ, ಅಂತಹ ಅಭ್ಯಾಸ ನನಗೆ ಬೇಡವೇ ಬೇಡ.

**ನಂಜ:** ನಿಮ್ಮ ಅಂಗಡಿಯಲ್ಲಿ ಬಟ್ಟೆ ತೆಗೆದುಕೊಂಡು ಶರ್ಟ್ ಹೊಲಿಸಿದರೆ, ಒಳ ಮೈ ಎಲ್ಲಾ ಕಾಣುತ್ತೆ.
**ಅಂಗಡಿಯವ:** ನಮ್ಮ ಅಂಗಡಿಯಲ್ಲಿ ಬೆಲೆಯೂ ಪಾರದರ್ಶಕ, ಬಟ್ಟೆಯೂ ಪಾರದರ್ಶಕ.

ಚುನಾವಣೆಗೆ ಸ್ಪರ್ಧೆ ವಯೋಮಿತಿ 18ಕ್ಕೆ ಇಳಿಕೆ



ನೀಟ್, ಸೀಟ್‌ಗಳ ಜಂಜಾಟ ಇಲ್ಲ.. ಗೆದ್ದರೆ ನೇರ ಪಾರ್ಲಿಮೆಂಟ್!

**ನಂಜ:** ಸರಳವಾಗಿ ಬದುಕಲು ಜಾಣತನ ಸಾಕು. ಮೈ ಕೈ ಪರಚಿಕೊಳ್ಳುವ ಅಗತ್ಯವಿಲ್ಲ.
**ಮಂಜ:** ಇಂದಿನ ಪೀಳಿಗೆಗೆ ಜಾಣತನ ಬೇಕಿಲ್ಲ, ಜಾಲತಾಣ ಇದ್ರೆ ಸಾಕು.

**ನಂಜ:** ನಿಮಗಿಂತ ಜ್ಯೂನಿಯರ್ಸ್ ಎಲ್ಲಾ ರಾಜ್ಯೋತ್ಸವ ಪ್ರಶಸ್ತಿ ತಗೊಳ್ತಿದ್ದಾರೆ. ಆ ಪ್ರಶಸ್ತಿಯನ್ನು ಪಡೆಯಲು ವಾಸ್ತವವಾಗಿ ಅವರಿಗಿಂತ ನೀವು ಹೆಚ್ಚು ಅರ್ಹರು. ಹುಟ್ಟು ಹೋರಾಟಗಾರರಾದ ನೀವು, ನಾಡು ನುಡಿ ಅಂದ್ರೆ ನಿದ್ದೆಯಲ್ಲೂ ಎದ್ದು ಕೂರ್ತೀರಿ. ಹೀಗಿರುವಾಗ, ಪ್ರಶಸ್ತಿ ಕೊಡದೆ ಸರ್ಕಾರ ನಿಮ್ಮನ್ನ ಕಡೆಗಣಿಸಿದೆ ಅಂತ ಅನಿಸುವುದಿಲ್ಲವೇ?
**ಮಂಜ:** ಪ್ರಶಸ್ತಿ ಬೇಡ ಅಂತ ನಾನೇ ಹೇಳಿದ್ದೀನಿ.
**ನಂಜ:** ಯಾಕೆ ಸರ್?
**ಮಂಜ:** ಪ್ರಶಸ್ತಿ ತಗೊಂಡ್ರೆ ಅದನ್ನೂ ಹೋರಾಟ ಮಾಡಿಯೇ ಪಡೆದುಕೊಂಡವ್ನೆ ಅಂತಾರೆ ಜನ. ಅದ್ಕೆ ಬೇಡ ಅಂದೆ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ